ಫ್ಯಾಕ್ಸ್ : 080 – 2202 8041 ದೂರವಾಣಿ : 080 – 2202 8032

ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2015-16 ದಿನಾಂಕ: 8-12-2015

# ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ / ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1. | <u>ಪತ್ರಿಕಾಗೋಷ್ಠಿ:</u><br><br>ನ್ಯಾಯಮೂರ್ತಿ ಶ್ರೀ ಸುಬ್ರೋ ಕಮಲ್ ಮುಖರ್ಜಿ,<br>ಹಂಗಾಮಿ ಮುಖ್ಯ ನ್ಯಾಯಾಧೀಶರು,<br>ಕರ್ನಾಟಕ ಉಚ್ಚ ನ್ಯಾಯಾಲಯ<br>ಮತ್ತು ಮುಖ್ಯ ಸಂಚಾಲಕರು,<br>ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ, ಬೆಂಗಳೂರು ಬೆಂಗಳೂರು.<br><br>ನ್ಯಾಯಮೂರ್ತಿ ಶ್ರೀ ಎನ್.ಕೆ. ಪಾಟೀಲ್,<br>ನ್ಯಾಯಾಧೀಶರು,<br>ಕರ್ನಾಟಕ ಉಚ್ಚ ನ್ಯಾಯಾಲಯ ಹಾಗೂ ಕಾರ್ಯನಿರ್ವಾಹಕ ಅಧ್ಯಕ್ಷರು,<br>ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ, ಬೆಂಗಳೂರು | **09-12-2015**<br>ಬುಧವಾರ<br>ಸಂಜೆ<br>**5-00** ಗಂಟೆಗೆ | ಎಕ್ಸಿಕ್ಯೂಟಿವ್ ಛೇರ್‌ಮನ್ ಹಾಲ್ (ಕೋರ್ಟ್ ಹಾಲ್ ಸಂಖ್ಯೆ 3 ಮತ್ತು 4 ರ ಎದುರು) ಮೊದಲನೇ ಮಹಡಿ, ಅನೆಕ್ಸ್ ಬಿಲ್ಡಿಂಗ್, ಕರ್ನಾಟಕ ಉಚ್ಚ ನ್ಯಾಯಾಲಯಗಳ ಕಟ್ಟಡ, ಬೆಂಗಳೂರು. |
| 2. | <u>**Press Meet:**</u><br><br>**Justice Subhro Kamal Mukherjee,**<br>**Acting Chief Justices,**<br>**High Court of Karnataka and Patron-in-Chief KSLSA, Bangalore.**<br><br>**Justice N.K. Patil,**<br>**Judge, High Court of Karnataka and Executive Chairman, KSLSA Bangalore.** | **09-12-2015**<br>**Wednesday at 5-00 PM** | **Executive Chairman Hall (opposite to Court Hall number 3 & 4) 1st Floor, Annex building, High Court of Karnataka, Bengaluru** |

| | | | |
|---|---|---|---|
| 3. | <u>ಗಾದೆಗಳ ಅಂತರಂಗ ಕೃತಿ ಬಿಡುಗಡೆ:</u><br><br>ಡಾ. ಕಾಳೇಗೌಡ ನಾಗವಾರ,<br>ಸಾಹಿತಿಗಳು ಹಾಗೂ ಮಾಜಿ ಅಧ್ಯಕ್ಷರು,<br>ಕರ್ನಾಟಕ ಯಕ್ಷಗಾನ ಹಾಗೂ ಜಾನಪದ ಅಕಾಡೆಮಿ<br><br><u>ಅಧ್ಯಕ್ಷತೆ:</u><br><br>ಪ್ರೊ. ಎಸ್. ಜಿ. ಸಿದ್ದರಾಮಯ್ಯ,<br>ಕವಿಗಳು ಹಾಗೂ ಚಿಂತಕರು,<br><br><u>ಮುಖ್ಯ ಅತಿಥಿಗಳು:</u><br><br>ಎನ್. ಆರ್. ವಿಶುಕುಮಾರ್,<br>ನಿರ್ದೇಶಕರು,<br>ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ | **09-12-2015**<br>ಬುಧವಾರ<br>ಸಂಜೆ<br>**5-00** ಗಂಟೆಗೆ | ಪ್ರಿಯದರ್ಶಿನಿ ಚಿತ್ರಮಂದಿರ,<br>ಬಾದಾಮಿ ಹೌಸ್,<br>ಜೆ.ಸಿ. ರಸ್ತೆ, ಬೆಂಗಳೂರು |

ನಿರ್ದೇಶಕರ ಪರವಾಗಿ

## <u>ಪತ್ರಿಕಾ ಪ್ರಕಟಣೆ</u>

# <u>ರಾಷ್ಟ್ರೀಯ ಲೋಕ ಅದಾಲತ್</u>

ಬೆಂಗಳೂರು, ಡಿಸೆಂಬರ್ **8** (ಕರ್ನಾಟಕ ವಾತೆ□)

ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ, ಕರ್ನಾಟಕ ಉಚ್ಛ ನ್ಯಾಯಾಲಯ, ಕಾನೂನು ಸೇವಾ ಸಮಿತಿ, ಕರ್ನಾಟಕ ರಾಜ್ಯ ಬಾರ್ ಕೌನ್ಸಿಲ್ ಮತ್ತು ರಾಜ್ಯ ವಕೀಲರ ಸಂಘ ಇವರ ಸಂಯುಕ್ತಾಶ್ರಯದಲ್ಲಿ ಡಿಸೆಂಬರ್ **12** ರಂದು ಬೆಳಿಗ್ಗೆ **10-00** ಗಂಟೆಗೆ ಕರ್ನಾಟಕ ಉಚ್ಛ ನ್ಯಾಯಾಲಯದ ಎರಡನೇ ಮಹಡಿಯಲ್ಲಿರುವ ಕಾನೂನು ಸೇವೆ ಪ್ರಾಧಿಕಾರದ ಸಭಾಂಗಣದಲ್ಲಿ ರಾಷ್ಟ್ರೀಯ ಲೋಕ ಅದಾಲತ್ ಕಾರ್ಯಕ್ರಮ ಏರ್ಪಡಿಸಲಾಗಿದೆ.

ಭಾರತದ ಸರ್ವೋಚ್ಚ ನ್ಯಾಯಾಲಯದ ನ್ಯಾಯಮೂರ್ತಿ ಶ್ರೀ ವಿ. ಗೋಪಾಲ್ ಗೌಡ ಅವರು ರಾಷ್ಟ್ರೀಯ ಲೋಕ ಅದಾಲತ್ ಉದ್ಘಾಟಿಸುವರು. ಕರ್ನಾಟಕ ಉಚ್ಛ ನ್ಯಾಯಾಲಯದ ಹಂಗಾಮಿ ಮುಖ್ಯ ನ್ಯಾಯಾಧೀಶ ಹಾಗೂ ಕರ್ನಾಟಕ ಕಾನೂನು ಸೇವಾ ಪ್ರಾಧಿಕಾರದ ಮುಖ್ಯ ಸಂಚಾಲಕರಾದ ನ್ಯಾಯಮೂರ್ತಿ ಶ್ರೀ ಸುಬ್ರೋ ಕಮಲ್ ಮುಖರ್ಜಿ ಅವರು ಅಧ್ಯಕ್ಷತೆ ವಹಿಸುವರು.

ಮುಖ್ಯ ಅತಿಥಿಗಳಾದ ಕರ್ನಾಟಕ ಉಚ್ಛ ನ್ಯಾಯಾಲಯದ ನ್ಯಾಯಮೂರ್ತಿ ಹಾಗೂ ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಕಾರ್ಯನಿರ್ವಾಹಕ ಅಧ್ಯಕ್ಷ ನ್ಯಾಯಮೂರ್ತಿ ಶ್ರೀ ಎನ್. ಕೆ. ಪಾಟೀಲ್, ಕರ್ನಾಟಕದ ಅಡ್ವೋಕೇಟ್ ಜನರಲ್ ಶ್ರೀ ಮಧುಸೂಧನ್ ಆರ್. ನಾಯಕ್, ಕರ್ನಾಟಕ ರಾಜ್ಯ ಬಾರ್ ಕೌನ್ಸಿಲ್ ಅಧ್ಯಕ್ಷ ಶ್ರೀ ಎ.ಆರ್. ಪಾಟೀಲ್ ಮತ್ತು ರಾಜ್ಯ ವಕೀಲರ ಸಂಘದ ಅಧ್ಯಕ್ಷ ಶ್ರೀ ಹೆಚ್.ಸಿ. ಶಿವರಾಂ ಅವರುಗಳು ಪಾಲ್ಗೊಳ್ಳುವರು.

ಪಲ್ಲವಿ:ಬಾಬು:ಜಿಪಿಆರ್

# ಕರ್ನಾಟಕ ಮುಕ್ತ ವಿ.ವಿ. ಪ್ರವೇಶಾತಿ ಆರಂಭ

**ಬೆಂಗಳೂರು, ಡಿಸೆಂಬರ್ 8 (ಕರ್ನಾಟಕ ವಾರ್ತೆ)**

**ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು 2015-16ನೇ ಶೈಕ್ಷಣಿಕ ಸಾಲಿನ ದ್ವಿತೀಯ ಬಿ.ಎ., ಬಿ.ಕಾಂ., ಕೋರ್ಸ್‌ಗಳಿಗೆ ಪ್ರವೇಶಾತಿಯನ್ನು ಆರಂಬಿಸಿದ್ದು ಬೋಧನಾ ಶುಲ್ಕ ರೂ 3200/- ಗಳಾಗಿದ್ದು ದಂಡ ಶುಲ್ಕ ರಹಿತ ದಿನಾಂಕ 04.01.2016 ರಂದು ಕಡೆಯ ದಿನವಾಗಿರುತ್ತದೆ, ದಂಡ ಶುಲ್ಕ 200/-ಗಳೊಂದಿಗೆ ದಿನಾಂಕ 18.01.2016 ರಂದು ಕಡೆಯ ದಿನವಾಗಿರುತ್ತದೆ ಮತ್ತು ದಂಡ ಶುಲ್ಕ 400/-ಗಳೊಂದಿಗೆ ದಿನಾಂಕ 28.01.2016 ರಂದು ಕಡೆಯ ದಿನವಾಗಿರುತ್ತದೆ.**

**ತೃತೀಯ ಬಿ.ಎ., ಬಿ.ಕಾಂ., ಕೋರ್ಸ್‌ಗಳಿಗೆ ಬೋಧನಾ ಶುಲ್ಕ ರೂ 3700/- ಗಳಾಗಿದ್ದು ದಂಡ ಶುಲ್ಕ ರಹಿತ ದಿನಾಂಕ 05.01.2016 ರಂದು ಕಡೆಯ ದಿನವಾಗಿರುತ್ತದೆ, ದಂಡ ಶುಲ್ಕ 200/-ಗಳೊಂದಿಗೆ ದಿನಾಂಕ 19.01.2016 ರಂದು ಕಡೆಯ ದಿನವಾಗಿರುತ್ತದೆ ಮತ್ತು ದಂಡ ಶುಲ್ಕ 400/-ಗಳೊಂದಿಗೆ ದಿನಾಂಕ 29.01.2016 ರಂದು ಕಡೆಯ ದಿನವಾಗಿರುತ್ತದೆ. ಅಂತಿಮ ಎಂ.ಎ., ಎಂ.ಕಾಂ., ಕೋರ್ಸ್‌ಗಳಿಗೆ ಬೋಧನಾ ಶುಲ್ಕ ರೂ 4500/- ಗಳು ಹಾಗೇಯೇ ಅಂತಿಮ ಎಂ.ಸಿ.ಜೆ., ಕೋರ್ಸ್‌ಗಳಿಗೆ ಬೋಧನಾ ಶುಲ್ಕ ರೂ 9000/- ಗಳಾಗಿದ್ದು ದಂಡ ಶುಲ್ಕ ರಹಿತ ದಿನಾಂಕ 06.01.2016 ರಂದು ಕಡೆಯ ದಿನವಾಗಿರುತ್ತದೆ, ದಂಡ ಶುಲ್ಕ 200/-ಗಳೊಂದಿಗೆ ದಿನಾಂಕ 20.01.2016 ರಂದು ಕಡೆಯ ದಿನವಾಗಿರುತ್ತದೆ ಮತ್ತು ದಂಡ ಶುಲ್ಕ 400/-ಗಳೊಂದಿಗೆ ದಿನಾಂಕ 30.01.2016 ರಂದು ಕಡೆಯ ದಿನವಾಗಿರುತ್ತದೆ.**

**ಭರ್ತಿ ಮಾಡಿದ ಅರ್ಜಿಯನ್ನು ಕ.ರಾ.ಮು.ವಿ. ಬೆಂಗಳೂರು ಪ್ರಾದೇಶಿಕ ಕೇಂದ್ರ-2 ರಲ್ಲಿ ಸಲ್ಲಿಸಿದರೆ ಸ್ಥಳದಲ್ಲಿಯೇ ಸಿದ್ದಪಾಠ ಹಾಗೂ ಗುರುತಿನ ಚೀಟಿಯನ್ನು ನವೀಕರಿಸುವ ಮೂಲಕ ಪ್ರವೇಶಾತಿ ನೀಡಲಾಗುವುದು. ಇದರ ಸದುಪಯೋಗವನ್ನು ಹೆಚ್ಚಿನ ವಿದ್ಯಾರ್ಥಿಗಳು ಪಡೆಯಬೇಕೆಂದು ಪ್ರಾದೇಶಿಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಹೆಚ್ಚಿನ ವಿವರಗಳಿಗಾಗಿ ನಂ-58, 1ನೇ ಮುಖ್ಯರಸ್ತೆ, 3ನೇ ಅಡ್ಡರಸ್ತೆ, ಮೈಕೋ ಲೇಔಟ್, ಬಿ.ಟಿ.ಎಂ.2ನೇ ಹಂತ, ಬೆಂಗಳೂರು-76. ಸ್ಥಿರ ದೂರವಾಣಿ ಸಂಖ್ಯೆ : 080 -26681320 ಅನ್ನು ಸಂಪರ್ಕಿಸಬಹುದಾಗಿದೆ.**

**ಪಲ್ಲವಿ/ಬಾಬು/ಕೆಎಂ**

# ಯುವ ವಿಜ್ಞಾನಿ ಪ್ರಶಸ್ತಿ 2015-16
# ರಾಜ್ಯ ಮಟ್ಟದ ಯುವ ವಿಜ್ಞಾನಿಗಳ ಸಮಾವೇಶ

**ಬೆಂಗಳೂರು, ಡಿಸೆಂಬರ್ 8 (ಕರ್ನಾಟಕ ವಾರ್ತೆ)**

ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು 2015-2016ನೇ ಸಾಲಿನ ಯುವವಿಜ್ಞಾನಿ ಪ್ರಶಸ್ತಿಗಾಗಿ 9 ರಿಂದ 12ನೇ ವರ್ಗದಲ್ಲಿ ಓದುತ್ತಿರುವ ಹಾಗೂ 18 ವರ್ಷ ವಯಸ್ಸು ಮೀರಿರದ ಅರ್ಹ ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಈ ಪ್ರಶಸ್ತಿಯನ್ನು ಕರ್ನಾಟಕ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ನೆರವಿನಲ್ಲಿ ಆಯೋಜಿಸಲಾಗಿದ್ದು, ವೈಜ್ಞಾನಿಕ ಕಾರ್ಯಕ್ರಮಗಳು ಹಾಗೂ ಚಟುವಟಿಕೆಗಳಲ್ಲಿ

ಭಾಗವಹಿಸಲು ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವ ಗುರಿ ಹೊಂದಿದೆ. ಇಂತಹ ಚಟುವಟಿಕೆಗಳಲ್ಲಿ ಭಾಗವಹಿಸಿ ತಮ್ಮ ಪ್ರತಿಭೆಯನ್ನು ತೋರಿದ ವಿದ್ಯಾರ್ಥಿಗಳನ್ನು ಆಯ್ದು, ಪ್ರಶಸ್ತಿಪತ್ರ ಹಾಗೂ ನಗದು ಬಹುಮಾನಗಳನ್ನು ನೀಡಿ ಗೌರವಿಸಲಾಗುತ್ತದೆ.

"ವಿಜ್ಞಾನ ಶಿಕ್ಷಣ ಮತ್ತು ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಸನವನ್ನು ಸಮಾಜದ ಅಭಿವೃದ್ಧಿಗೆ ಬೆಸೆಯುವ" ಒಂದು ಅಭೂತಪೂರ್ವ ಪ್ರಯತ್ನವಾಗಿ ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು ಈ ಯೋಜನೆಯನ್ನು ಕೈಗೊಂಡಿದೆ. ಎಳೆಯ ವಯಸ್ಸಿನಲ್ಲೇ 'ವೈಜ್ಞಾನಿಕ ವಿಧಾನ'ದ ಮನವರಿಕೆ ಮಾಡುವುದು, ಭವಿಷ್ಯದ ವಿಜ್ಞಾನಿಗಳನ್ನಾಗಿ ರೂಪಿಸುವುದು, ರಾಜ್ಯದ / ರಾಷ್ಟ್ರದ ವೈಜ್ಞಾನಿಕ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಲು ಅವಕಾಶ ನೀಡುವುದು, ಮೂಲ ವಿಜ್ಞಾನ ವಿಷಯಗಳಲ್ಲಿ ಆಸಕ್ತಿ ಹಾಗೂ ಚಿಂತನ ಕೌಶಲ್ಯವನ್ನು ವರ್ಧಿಸಬೇಕೆಂಬುದು ಕರಾವಿಪದ ಉದ್ದೇಶ.

ಡಿಸೆಂಬರ್ 8, 2015ರ ಬದಲಿಗೆ ***ಡಿಸೆಂಬರ್ 23, 2015 ರವರೆಗೆ ಅರ್ಜಿ ಸಲ್ಲಿಸಲು ವಿಸ್ತರಿಸಲಾಗಿದೆ.*** ಈ ಯೋಜನೆಯಲ್ಲಿ ಭಾಗವಹಿಸಲು ಇಚ್ಛಿಸುವ ವಿದ್ಯಾರ್ಥಿಗಳು ಸಾರ್ವಜನಿಕ ಶಿಕ್ಷಣ ಇಲಾಖೆ, ಪದವಿಪೂರ್ವ ಶಿಕ್ಷಣ ಇಲಾಖೆ ಅಥವಾ ಕರಾವಿಪ ವೆಬ್‌ಸೈಟ್ (www.krvp.org) ನಿಂದ ಅರ್ಜಿ ಮಾಹಿತಿಯನ್ನು ಪಡೆಯಬಹುದು. ಸೂಕ್ತ ದಾಖಲೆಗಳೊಂದಿಗೆ ಭರ್ತಿ ಮಾಡಿದ ಅರ್ಜಿಯನ್ನು ***ಡಿಸೆಂಬರ್ 23, 2015 ರವರೆಗೆ ವಿಸ್ತರಿಸಲಾಗಿದ್ದು*** ತಮ್ಮ ಜಿಲ್ಲೆಯ ಸಾರ್ವಜನಿಕ ಶಿಕ್ಷಣ ಇಲಾಖೆ, ಉಪನಿರ್ದೇಶಕರ ಕಚೇರಿಗೆ ಸಲ್ಲಿಸುವುದು. ಜಿಲ್ಲಾ ಮಟ್ಟದ ಸ್ಪರ್ಧೆಯನ್ನು ದಿನಾಂಕ ***9–1–2016*** ರಂದು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ಏಕಕಾಲದಲ್ಲಿ ಆಯೋಜಿಸಲಾಗುವುದು. ಜಿಲ್ಲಾ ಮಟ್ಟದಲ್ಲಿ ಪ್ರಥಮ, ದ್ವಿತೀಯ ಮತ್ತು ತೃತೀಯ ಸ್ಥಾನ ಪಡೆದ ಯುವ ವಿಜ್ಞಾನಿಗಳು 2016ರ ಜನವರಿಯಲ್ಲಿ ಜರುಗುವ ರಾಜ್ಯಮಟ್ಟದ ವಿಜ್ಞಾನ ಸಮಾವೇಶದಲ್ಲಿ ಭಾಗವಹಿಸಲು ಅರ್ಹತೆ ಪಡೆಯುತ್ತಾರೆ. ರಾಜ್ಯ ಮಟ್ಟದ ಸ್ಪರ್ಧೆಯು 3 ದಿನಗಳ ಕಾಲ ಜರುಗಲಿದ್ದು ಖ್ಯಾತ ವಿಜ್ಞಾನಿಗಳು ವಿದ್ಯಾರ್ಥಿಗಳೊಂದಿಗೆ ಸಂವಾದಿಸುವರು.

ಆಸಕ್ತ ವಿದ್ಯಾರ್ಥಿಗಳು ಹೆಚ್ಚಿನ ಮಾಹಿತಿಗಾಗಿ ರಾಜ್ಯ ಸಂಯೋಜಕರಾದ ಶ್ರೀ ಗಿರೀಶ ಬಿ. ಕಡ್ಲೇವಾಡ ಮೊ. 9448830454 ಅಥವಾ ಕರಾವಿಪ ಕಚೇರಿ ದೂರವಾಣಿ 080–26718939/59 ಇವರನ್ನು ಸಂಪರ್ಕಿಸುವುದು.

ಪಲ್ಲವಿ/ಕೆಎಂ